ದಿನಾಂಕ 22.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ- 1ನೇ ಎದುರುದಾರರ ಪರ ವಕೀಲರಿಂದಃ-</u>**

ಅಪಘಾತದ ಸಂರ್ಭದಲ್ಲಿ ನಾನು ಪೊನ್ನಂಪೇಟೆಯಿಂದ ಕಾನೂರು ಕಡೆಗೆ ಹೋಗುತ್ತಿದ್ದೆನು. ಅಪಘಾತ ಪಡಿಸಿದ ಕಾರು ಕಾನೂರು ಕಡೆಯಿಂದ ಬರುತ್ತಿತ್ತು. ನನಗೆ ಡಿಕ್ಕಿಪಡಿಸುವವರೆಗೂ ನಾನು ಕಾರನ್ನು ನೋಡಿರುವುದಿಲ್ಲ. ಅಪಘಾತವಾದ ಕೂಡಲೇ ನನಗೆ ಪ್ರಜ್ಞೆ ತಪ್ಪಿದು, ಎಚ್ಚರವಾದಾಗ ಗೋಣಿಕೊಪ್ಪದ ಗೌರಮ್ಮ ಆಸ್ಪತ್ರೆಯಲ್ಲಿ ಇದ್ದೆನು. ನಾನು ಅರ್ಜಿಯಲ್ಲಿ ತಿಳಿಸಿರುವಂತೆ ಅಪಘಾತದಿಂದ ನನ್ನ ಎಡ ಕಾಲಿಗೆ ಗಾಯವಾಗಿರುತ್ತದೆ. ಕಾರಿನ ಚಾಲಕನನ್ನು ಮತ್ತು ಅದರಲ್ಲಿ ಪ್ರಯಾಣಿಕರನ್ನು ಮತ್ತು ಕಾರಿನ ನೋಂದಣಿ ಸಂಖ್ಯೆಯನ್ನು ನಾನು ಅಪಘಾತವಾದ ಸಂದರ್ಭದಲ್ಲಿ ನೋಡಿರುವುದಿಲ್ಲ.

ನಾನು ರೂ. 2,50,000/- ಹಣವನ್ನು ವೈದ್ಯಕೀಯ ವೆಚ್ಚಗಳಿಗೆ ಖರ್ಚು ಮಾಡಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನಗೆ ಮುಂದುವರೆದ ಚಿಕಿತ್ಸೆಯ ಅವಶ್ಯಕತೆ ಇರುವ ಬಗ್ಗೆ ವೈದ್ಯರು ತಿಳಿಸಿದ ಸಲಹಾ ಚೀಟಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರವುದಿಲ್ಲ. ದೈಹಿಕ ನ್ಯೂನ್ಯತೆಯ ಪ್ರಮಾಣಪತ್ರವನ್ನು ವೈದ್ಯರು ನನಗೆ ನೀಡಿರುವುದಿಲ್ಲ. ಆದುದ್ದರಿಂದ ನಾನು ಅರ್ಜಿಯಲ್ಲಿ ಕೋರಿರುವಂತಹ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ವಕೀಲರಾದ ಶ್ರೀ ಎ.ಬಿ ರವರಿಂದಃ**

ನಾನು ಚಿಕಿತ್ಸೆಯನ್ನು ಮಡಿಕೇರಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತೇನೆ. ನಾನು ಸದರಿ ಆಸ್ಪತ್ರೆಯಲ್ಲಿ ವೈದ್ಯಕೀಯ ವೆಚ್ಚಗಳಿಗೆ ಸಂಬಂಧಿಸಿದಂತೆ ರೂ. **75,000/-** ಹಣವನ್ನು ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಡಿಕೇರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ಶಸ್ತ್ರ ಚಿಕಿತ್ಸೆಯನ್ನು ಮಾಡದೇ ಇದುದ್ದರಿಂದ, ಸೂಕ್ತ ಚಿಕಿತ್ಸೆಯನ್ನು ಪಡೆದುಕೊಳ್ಳಲು ಸೂಳ್ಯದ ಕೆ.ವಿ.ಜಿ ಆಸ್ಪತ್ರೆಗೆ ನಾನು ಹೋಗಿರುತ್ತೇನೆ.

ಮಡಿಕೇರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ ಎಂಬ ಬಗ್ಗೆ ಕೆ.ವಿ.ಜಿ ಆಸ್ಪತ್ರೆಯ ವೈದ್ಯರು ಬರವಣಿಗೆಯಲ್ಲಿ ನೀಡಿರುವುದಿಲ್ಲ. ಕೆ.ವಿ.ಜಿ ಆಸ್ಪತ್ರೆಯಲ್ಲಿ ನಾನು ರೂ. **10,000/-** ಹಣ ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ **18** ರ ಮುಖ್ಯ ಬಿಲ್ಲಿನಲ್ಲಿ ಉಳಿದ ಸಣ್ಣಪುಟ್ಟ ಬಿಲ್ಲುಗಳ ಮೊತ್ತವೂ ಸಹಾ ಸೇರ್ಪಡೆಗೊಂಡಿದೆ ಎಂದರೆ ಸರಿಯಲ್ಲ. ನಾನು ಆಟೋ ಚಾಲಕನಾಗಿರುವ ಬಗ್ಗೆ ಪರವಾನಗಿಯನ್ನು ನಾನು ನ್ಯಾಯಾಲಯಲಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಆಟೋ ಚಾಲಕನಾಗಿ ಇಲ್ಲದೇ ಇದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ದೈಹಿಕ ನ್ಯೂನ್ಯತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಂದರ್ಭದಲ್ಲಿ **1**ನೇ ಎದುರುದಾರರು ಚಾಲನಾ ಪರವಾನಗಿಯನ್ನು ಹೊಂದಿರಲಿಲ್ಲ ಹಾಗೂ ಮಧ್ಯಪಾನ ಮಾಡಿ ಕಾರನ್ನು ಚಲಾಯಿಸುತ್ತಿದ್ದುದ್ದಾಗಿ ಪೋಲೀಸರು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು

ವಿರಾಜಪೇಟೆ.